**Publication: Hosadigantha**
**Date:20.08.2022**

ಹೊಸ ದಿಗಂತ
4
20 Aug 2022

# ಹವಾಮಾನ ಬದಲಾವಣೆ ಸವಾಲಿಗೆ ದೇಶಿ ದೃಷ್ಟಿಕೋನದ ಪರಿಹಾರ

**ಬೆಂಗಳೂರು:** ಕೈಗಾರಿಕಾ ಕ್ರಾಂತಿ ಮತ್ತಿತರ ಆಧುನಿಕ ಸಂಗತಿಗಳಿಂದ ಹವಾಮಾನ ಬದಲಾವಣೆ ತರಹದ ಗಂಭೀರ ಸಮಸ್ಯೆಗಳು ಎದುರಾಗಿದ್ದು, ದೇಶೀಯ ಮಾದರಿಯ ಪರಿಹಾರಗಳನ್ನು ಕಂಡುಕೊಳ್ಳಬೇಕಾದ ಅಗತ್ಯವಿದೆ ಎಂದು ಐಟಿ-ಬಿಟಿ ಸಚಿವ ಡಾ. ಸಿ.ಎನ್. ಅಶ್ವತ್ಥ ನಾರಾಯಣ ಸಲಹೆ ನೀಡಿದ್ದಾರೆ.

ಪರ್ಯಾವರಣ ಗತಿವಿಧಿ ಸಂಘಟನೆಯು ನಗರದ ಸಿಎಂಆರ್ ವಿಶ್ವವಿದ್ಯಾಲಯದಲ್ಲಿ ಏರ್ಪಡಿಸಿರುವ ಎರಡು ದಿನಗಳ ಇಕೋ ಯೂತ್ ಸ್ಟಾರ್ಟ್‌ಅಪ್ ಸಮಾವೇಶ-2022ರ ಉದ್ಘಾಟನಾ ಸಮಾರಂಭದಲ್ಲಿ ಅವರು ಶುಕ್ರವಾರ ಮಾತನಾಡಿ, ಇಂದು ಹುಟ್ಟುತ್ತಿರುವ ಮಕ್ಕಳ ರಕ್ತದಲ್ಲೇ ಪ್ಲಾಸ್ಟಿಕ್ ಸೇರಿದೆ. ಇದರ ಜೊತೆಗೆ ಕೈಗಾರಿಕಾ ತ್ಯಾಜ್ಯ, ಜಲ ಮಾಲಿನ್ಯ, ಮನೆಯಲ್ಲಿ ಉತ್ಪತ್ತಿಯಾಗುತ್ತಿರುವ ವಿಷಯುಕ್ತ ರಾಸಾಯನಿಕಗಳು, ವಾಹನಗಳು ಸೃಷ್ಟಿಸುತ್ತಿರುವ ಮಾಲಿನ್ಯ ಎಲ್ಲವೂ ಸೇರಿಕೊಂಡು ಬದುಕು ಚಕ್ರವ್ಯೂಹದಂತೆ ಆಗಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದರು.

**ಪಾಶ್ಚಾತ್ಯ ಮಾದರಿಯ ಪರಿಹಾರ ದುಬಾರಿ** : ಹವಾಮಾನ ಬದಲಾವಣೆ ಸಮಸ್ಯೆಗಳಿಗೆ ಪಾಶ್ಚಾತ್ಯ ಮಾದರಿಯ ಪರಿಹಾರಗಳು ದುಬಾರಿಯಾಗಿವೆ. ಇಂತಹ ಸಂದರ್ಭಗಳಲ್ಲಿ ನಮ್ಮ ಉದ್ಯಮಿಗಳು ನಾವೀನ್ಯತೆಗೆ ಒತ್ತು ಕೊಡುವ ನವೋದ್ಯಮಗಳನ್ನು ಸ್ಥಾಪಿಸುವುದೇ ಇದಕ್ಕೆ ಪರಿಹಾರವಾಗಿದೆ. ಇವು ಪರಿಸರದಲ್ಲಿ ಸುಸ್ಥಿರತೆ ಕಾಪಾಡಬೇಕು ಎಂದು ಸಚಿವ ಡಾ. ಅಶ್ವತ್ಥನಾರಾಯಯಣ ತಿಳಿಸಿದರು.

ಸಮಾವೇಶದಲ್ಲಿ 200ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳು ಮತ್ತು 70ಕ್ಕೂ ಹೆಚ್ಚು ಸಂಸ್ಥೆಗಳು ಭಾಗವಹಿಸಿದವು. ಸಮರ್ಥಭಾರತದ ನಿರ್ದೇಶಕ ನಾ.ತಿಪ್ಪೇಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.




**Publication: Hosadigantha**
**Date:21.08.2022**

21 Aug 2022

## ರಾಜ್ಯಪಾಲ ತಾವರ್ ಚಂದ್ ಗೆಹಲೋತ್ ಅಭಿಮತ

# ಪರಿಸರಸ್ನೇಹಿ ಸ್ಟಾರ್ಟ್‌ಅಪ್

**ಬೆಂಗಳೂರು:** ಭಾರತವು ಬೃಹತ್ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯನ್ನು ಹೊಂದಿದ್ದು, ಕೇಂದ್ರ ಸರ್ಕಾರವು ಮೇಕ್ ಇನ್ ಇಂಡಿಯಾ ಮೂಲಕ ಹೊಸ ಪರಿಸರ ಸ್ನೇಹಿ ಆಲೋಚನೆಗಳನ್ನು ಪ್ರೋತ್ಸಾಹಿಸುತ್ತಿದೆ ಎಂದು ರಾಜ್ಯಪಾಲ ತಾವರ್ ಚಂದ್ ಗೆಹಲೋತ್ ಹೇಳಿದರು.

ಅವರು ಪರ್ಯಾವರಣ ಸಂರಕ್ಷಣಾ ಗತಿವಿಧಿ, ಸಿಎಂಆರ್ ವಿಶ್ವವಿದ್ಯಾಲಯ, ರೈನ್‌ಮ್ಯಾಟರ್ ಫೌಂಡೇಶನ್ ಹಾಗೂ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಸಿಎಂಆರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ನಡೆದ ಇಕೋ ಯೂತ್ ಸ್ಟಾರ್ಟ್ ಅಪ್ ಶೃಂಗಸಭೆಯಲ್ಲಿ ಮಾತನಾಡಿದರು. ಭಾರತದ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯ ಬೃಹತ್ ಸಾಮರ್ಥ್ಯವನ್ನು ಟ್ಯಾಪ್ ಮಾಡುವುದು ಮತ್ತು ಹವಾಮಾನ ಬದಲಾವಣೆ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಹಾಯ ಮಾಡುವ ಹೆಚ್ಚು ಹೆಚ್ಚು ಪರಿಸರ ಸ್ನೇಹಿ ಸ್ಟಾರ್ಟ್ ಅಪ್‌ಗಳನ್ನು ಹೊಂದುವುದು ಈ ಸಮಯದ ತುರ್ತು ಅಗತ್ಯವಿದೆ ಎಂದು ಪ್ರತಿಪಾದಿಸಿದರು.

**ಶೃಂಗಸಭೆಗೆ ಸಲ್ಲಿಕೆ** : ಇಕೋ ಯೂತ್ ಸ್ಟಾರ್ಟ್‌ಅಪ್ ಶೃಂಗಸಭೆಯಲ್ಲಿ ದಕ್ಷಿಣ ಭಾರತದಾದ್ಯಂತ 200 ಪರಿಸರ ಸ್ನೇಹಿ ಸ್ಟಾರ್ಟ್‌ಅಪ್‌ಗಳು ತಮ್ಮ ಆಲೋಚನೆಗಳನು ಸಲ್ಲಿಸಿದ್ದು, 71 ಸೆಮಿ ಫೈನಲಿಸ್ಟ್ ಅದನ್ನು ಶೃಂಗಸಭೆಯಲ್ಲಿ ಪ್ರಸ್ತುತಪಡಿಸಿದರು. ಈ ಪೈಕಿ 6 ಆಲೋಚನೆಗಳು ಅಂತಿಮ ಹಂತಕ್ಕೆ ತಲುಪಿದವು. ಶನಿವಾರ 6 ಅಂತಿಮ ಸ್ಪರ್ಧಿಗಳು ವಿವಿಧ ಸಾಹಸೋದ್ಯಮ ಬಂಡವಾಳ ಸಂಸ್ಥೆಗಳು ಮತ್ತು ಇನ್ಕ್ಯುಬೇಟರ್‌ಗಳ ಭಾಗವಾಗಿರುವ ತೀರ್ಪುಗಾರರಿಗೆ ತಮ್ಮ ಪರಿಸರ ಸ್ನೇಹಿ ಆಲೋಚನೆಗಳನ್ನು ಪ್ರಸ್ತುತಪಡಿಸಿದರು.

ಐಡಿಯೇಶನ್ (ಕಲ್ಪನೆ), ಉತ್ಪನ್ನ ಮತ್ತು ಮಾರುಕಟ್ಟೆ ಪ್ರವೇಶ ಈ ವಿಭಾಗಗಳಿಂದ 3 ವಿಜೇತರನ್ನು ಆಯ್ಕೆ ಮಾಡಲಾಯಿತು. ರೈನ್ ಮ್ಯಾಟರ್ ಫೌಂಡೇಶನ್ ಐಡಿಯೇಶನ್ ವಿಭಾಗದ ವಿಜೇತರಿಗೆ 1ಲಕ್ಷ ರೂ., ಉತ್ಪನ್ನ ವರ್ಗದ ವಿಜೇತರಿಗೆ 2 ಲಕ್ಷ ರೂ. ಮತ್ತು ಮಾರುಕಟ್ಟೆ ಪ್ರವೇಶ ವಿಭಾಗದ ವಿಜೇತರಿಗೆ 3 ಲಕ್ಷ ರೂ. ನಗದು ಬಹುಮಾನ ನೀಡಿತು. ವಿಜೇತರಿಗೆ ಆಕ್ಸೆಲ್‌ನ ಪಾಲುದಾರ ಪ್ರಶಾಂತ್ ಪ್ರಕಾಶ್ ಮತ್ತು ವೆಂಕಟರಾಮನ್ ಅಸೋಸಿಯೇಟ್ಸ್‌ನಿಂದ ನರೇಶ್ ನರಸಿಂಹನ್ ಬಹುಮಾನಗಳನ್ನು ವಿತರಿಸಿದರು.

ಸಿಎಂಆರ್ ವಿವಿಯ ಅಧ್ಯಕ್ಷ ಕೆ.ಸಿ. ರಾಮಮೂರ್ತಿ, ಗ್ರ್ಯಾಮಿ ಪ್ರಶಸ್ತಿ ವಿಜೇತ ಸಂಗೀತ ಸಂಯೋಜಕ ರಿಕಿ ಕೇಜ್ ಹಾಜರಿದ್ದರು.



“ ಹವಾಮಾನ ಮತ್ತು ಪರಿಸರ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸಲು ಪರಿಸರ ಸ್ನೇಹಿ ಪರಿಹಾರಗಳೊಂದಿಗೆ ಬರುವಂತೆ ನಾವು ನಿರಂತರವಾಗಿ ಯುವಕರನ್ನು ಪ್ರೋತ್ಸಾಹಿಸುತ್ತೇವೆ. ಈ ವಿಚಾರಗಳನ್ನು ಉತ್ತೇಜಿಸುವ ಕಾರ್ಯಕ್ರಮಗಳನ್ನು ಪರ್ಯಾವರಣ ಸಂರಕ್ಷಣಾ ಗತಿವಿಧಿ ಯಾವಾಗಲೂ ಬೆಂಬಲಿಸುತ್ತದೆ.

■ ಗೋಪಾಲ್ ಆರ್ಯ, ಪರ್ಯಾವರಣ ಸಂರಕ್ಷಣಾ ಗತಿವಿಧಿಯ ಅಖಿಲ ಭಾರತೀಯ ಸಂಚಾಲಕ